ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Saturday, the 10th July, 1982 / Ashada 19, 1904

The House met in the Assembly Chamber, Vidhana Soudha at Nine of the Clock.

[MR. DEPUTY SPEAKER (SRI BAPU RAO HULSORKER) in the Chair.]

STARRED QUESTIONS

(To which oral answers were given)

Opening of Fair Price Depots for unemployed persons in the State

345 SRI K. H. HANUME GOWDA (Hassan).—Will the Minister for Food and Civil Supplies be pleased to state :

(a) the number of applications received from the educated unemployed persons to open Fair Price Depots in various districts of the State ;

(b) out of them, the number of persons to whom permission has been accorded to open Fair Price Depots in various districts ?

SRI MANIK RAO PATIL (Minister for Food and Civil Snpplies).—

(a) Districtwise list is appended

(b) Districwise list is appended

STATEMENT

Sl. No.	District	The number of applications received from the educated unemployed persons to open Fair Price Depots in various Districts of the State	Out of them, the number of persons to whom permission has been accorded to open Fair Price Depots invarious Districts
1	2	3	4
1.	Bangalore City ...	307	41
2.	Bangalore ...	3	...
3.	Belgaum ...	8	3
4.	Bellary ...	5	...
5.	Bidar ...	13	2
6	Bijapur ...	6	1
7.	Chickmagalur ...	14	...
8.	Chitradurga ...	2	1
9.	Dakshina Kannada ...	4	1
10.	Dharwad ...	4	2
11.	Gulbarga ...	7	4
12.	Hassan ...	88	30
13.	Kodagu ...	...	...
14.	Kolar ...	4	...
15.	Mandya ...	15	7
16.	Mysore ...	61	15
17.	Raichur ...	14	9
18.	Shimoga ...	10	...
19.	Tumkur ...	16	10
20.	Uttara Kannada ...	7	...
	Total ...	588	126

ಶ್ರೀ ಕೆ. ಎಚ್. ಹನುಮೇಗೌಡ.—ಹಿಂದಿನ ಸಚಿವರು ಉತ್ತರ ಕೊಡುವಾಗ ವಿದ್ಯಾವಂತ ನಿರುದ್ಯೋಗಿಗಳು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅರ್ಜಿಗಳನ್ನು ಹಾಕಿದರೆ ಅವರಿಗೆ ಆದ್ಯತೆ ಕೊಡಲಾಗುತ್ತದೆಂದು ತಿಳಿಸಿದ್ದರು. ಅವರು ಹೇಳಿದ ಪ್ರಕಾರ ಇದುವರೆಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಿದ್ದೀರಿ ?

SRI MANIKRAO PATIL.—Sir, details are given in the statement appended to the question and answers list.

ಶ್ರೀ ಕೆ. ಎಚ್. ಹನುಮೇಗೌಡ.—ನಿರುದ್ಯೋಗ ವಿದ್ಯಾವಂತರಿಂದ ಇದುವರೆಗೆ ಸುಮಾರು ಅರ್ಜಿಗಳು ಬಂದಿದ್ದು, ಆ ಅರ್ಜಿಗಳ ಪೈಕಿ ೧೨೬ ಅರ್ಜಿಗಳಿಗೆ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶ ಮಾಡಿಕೊಟ್ಟಿದ್ದೀರಿ. ಉಳಿದ ಅರ್ಜಿಗಳಿಗೆ ಹೆಚ್ಚಾಗಿ ಗಮನ ಕೊಡದಿರುವುದಕ್ಕೆ ಕಾರಣವೇನು ?

SRI MANIKRAO PATIL.—We cannot give licence to all the applicants. It depends upon the vacancies available. Subject to the availability of vacancies we are allotting fair price shops.

ಶ್ರೀ ಪಿ. ಎನ್. ರೆಡ್ಡಿ.—ವಿದ್ಯಾವಂತ ಯುವಕರಿಗೆ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶ ಕೊಡುತ್ತೇವೆಂದು ಹೇಳಿದ್ದಾರೆ. ಅಂಗಡಿಗಳನ್ನು ತೆರೆಯಲು ಪರವಾನಿಗಿ ಕೊಡುವಾಗ ಒಂದು ಪದ್ಧತಿಯನ್ನು ಅನುಸರಿಸುತ್ತೀರಿ. ಸೊಸೈಟಿಗಳು, ಪಂಚಾಯಿತಿಗಳು ಇಲ್ಲದಿರುವ ಕಡೆಗಳಲ್ಲಿ ರಿಜಿಸ್ಟರ್ ಆದ ಯುವಕ ಸಂಘಗಳು ಇರುವ ಕಡೆ ಅವುಗಳಿಗೆ ನ್ಯಾಯ ಬೆಲೆ ಅಂಗಡಿ ತೆರೆಯಲು ಅನುಮತಿ ಕೊಡುವ ಆಜ್ಞೆಯನ್ನು ಹೊರಡಿಸುತ್ತೀರಾ ? ಯುವಕ ಸಂಘಗಳು ಅರ್ಜಿಗಳನ್ನು ಹಾಕಿದರೆ ಅವರುಗಳಿಗೆ ಕೊಡುತ್ತಿಲ್ಲ.

SRI MANIKRAO PATIL.—Sir, already we have issued guidelines to the Deputy Commissioners that first preference should be given to the Co-operative societies. In case co-operative societies are not coming forward to undertake the distribution of essential commodities then they should give preference to Panchayats. If Panchayats do not come forward then preference should given to the youth clubs and even if youth clubs do not come forward they should consider individuals.

ಶ್ರೀ ಪಿ. ಎನ್. ರೆಡ್ಡಿ.—ಸರ್ಕ್ಯುಲರ್ ಇದೆ ಎಂದು ಹೇಳುತ್ತೀರಿ, ಯುವಕರು ಮುಂದೆ ಬಂದರೆ ಅಂತಹವರಿಗೆ ಅವಕಾಶ ಕೊಡದಿದ್ದರೆ ಅಂತಹ ಅಧಿಕಾರಿಗಳಿಗೆ ಏನು ಶಿಕ್ಷೆ ಕೊಡುತ್ತೀರಿ ? ಅಂತಹ ನಿದರ್ಶನಗಳಿವೆ. ಉದಾಹರಣೆಗೆ ನಮ್ಮ ಗ್ರಾಮಾಭಿವೃದ್ಧಿ ಸಚಿವರು ಹೊಸಕೋಟೆ ತಾಲ್ಲೂಕು ಹುಲಿಮಂಗಲ ಗ್ರಾಮಕ್ಕೆ ಬಂದಿದ್ದಾಗ ಅವರು ಆಶ್ವಾಸನೆ ಕೊಟ್ಟರು. ಅಧಿಕಾರಿಗಳು ಅಂದರೆ ತಹಶೀಲ್ದಾರ್ ಮತ್ತು ಫುಡ್ ಅಸಿಸ್ಟೆಂಟ್ ಮಂತ್ರಿಗಳು ಹೇಳಿದ್ದನ್ನು ತಳ್ಳಿಹಾಕುತ್ತಿದ್ದಾರೆ. ಆ ಅಧಿಕಾರಿಗಳು ಮಂತ್ರಿಗಳು ಹೇಳಿದ್ದನ್ನು ಬಹಳ ಸಾಧಾರಣವಾಗಿ ತಿಳಿದುಕೊಳ್ಳುತ್ತಾರೆ. ಇಂತಹ ಅಧಿಕಾರಿಗಳಿದ್ದಾರೆ, ಫುಡ್ ಅಸಿಸ್ಟೆಂಟ್‌ರವರು ಕಡೆಗಣಿಸಿದ್ದಾರೆ. ಪಂಚಾಯಿತಿಗಳು, ಸೊಸೈಟಿಗಳು ಇಲ್ಲದಿರುವ ಕಡೆ ಯುವಕ ಸಂಘದವರು ಅರ್ಜಿ ಹಾಕಿಕೊಂಡರೆ ಅವರಿಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶ ಮಾಡಿಕೊಡಬೇಕು. ಇದಕ್ಕೆ ಅಡ್ಡಿ ಬರುವಂತಹ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಇವೆರಡಕ್ಕೂ ಆಶ್ವಾಸನೆ ಕೊಡಬೇಕು.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಸರ್ಕಾರಿ ಆಜ್ಞೆಯನ್ನು ಉಲ್ಲಂಘನೆ ಮಾಡಿರುವಂತಹ ಕೇಸು ನಮ್ಮ ಕಣ್ಣಿಗೆ ಬಿದ್ದಿಲ್ಲ. ಎಲ್ಲಾ ಪಂಚಾಯಿತಿಗಳು ಮತ್ತು ಸೊಸೈಟಿಗಳು ಸರಿಯಾಗಿ ವಿತರಣೆ ಮಾಡಿಕೊಂಡು ಕೆಲಸ ಮಾಡಿಕೊಂಡು ಹೋಗುತ್ತಿವೆ. ಯುವಕರ ಪ್ರಶ್ನೆ ಉದ್ಭವವಾಗುವುದಿಲ್ಲ. ಯಾವ ಜಾಗದಲ್ಲಿ ಪಂಚಾಯಿತಿ ಮತ್ತು ಸೊಸೈಟಿಗಳು ಇರುವುದಿಲ್ಲ ಅಂತಹ ಕಡೆಗಳಲ್ಲಿ ಯುವಕ ಕ್ಲಬ್‌ಗಳಿಗೆ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶ ಮಾಡಿಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರದಲ್ಲಿ ಹೊಸದಾಗಿ ೪೧ ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದೀರಿ. ಯಾವ ಯಾವ ಕ್ಷೇತ್ರಗಳಲ್ಲಿ ಇವುಗಳನ್ನು ಕೊಟ್ಟಿದ್ದೀರಾ ಎಂಬುದನ್ನು ತಿಳಿಸಬೇಕು. ಈ ಅಂಗಡಿಗಳನ್ನು ತೆರೆಯಲು ಹರಿಜನ ಗಿರಿಜನರಿಗೆ ಆದ್ಯತೆ ಕೊಡಲಾಗುವುದೆಂದು ಹೇಳಿದ್ದೀರಿ. ಆದ ಕಾರಣ ಇಂತಹ ಎಷ್ಟು ಮಂದಿಗೆ ಅವಕಾಶ ಮಾಡಿಕೊಟ್ಟಿದ್ದೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಮಾಣಿಕ್‌ರಾವ್ ಪಾಟೀಲ್. ಬೆಂಗಳೂರು ನಗರದಲ್ಲಿ ಸುಮಾರು ೮ ಜನ ಹರಿಜನ ಅಭ್ಯರ್ಥಿಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶ ಕೊಟ್ಟಿದ್ದೇವೆ. ಬೆಂಗಳೂರು ನಗರದ ಯಾವ ಯಾವ ಕ್ಷೇತ್ರಗಳಲ್ಲಿ ಕೊಡಲಾಗಿದೆ ಎಂಬುದಕ್ಕೆ ಈಗ ನನ್ನ ಬಳಿ ವಿವರವಿಲ್ಲ. ಮಾನ್ಯ ಸದಸ್ಯರು ಬೇರೆ ಇನ್ನೊಂದು ಪ್ರಶ್ನೆ ಕೇಳಿದರೆ ಈ ವಿವರಣೆ ಕೊಡುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ನಿವೃತ್ತ ಸೈನಿಕರು ವ್ಯಕ್ತಿಗತವಾಗಿ ಈ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಮುಂದೆ ಬಂದರೆ ತಾವು ಅನುಮತಿ ಕೊಡುತ್ತೀರಾ ?

SRI MANIKRAO PATIL.—Whenever vacancies arise for allotment of fairprice shops to them, we are keeping all these points in view We are considering the merits of various candidates, whether he is an unemployed graduate, disabled person or an ex-service man. To the extent possible, we are trying to accommodate these people.

SRI WILLIAN ST. JOHN SINCLAIR MARLEY.—I have a request to make to the Government in view of the poor performance of the co-operative societies. Could not the Government be more selective in the types of people that they are selecting to undertake these jobs of fair price shops ? This, I am asking, is in view of the Hon. Minister's reply that they would consider Co-operative Societies first, and then Panchayats and Youth Clubs.

SRI MANIKRAO PATIL.—We are entertaining such of the societies which are viable and which are prepared to undertake the work without commiting any defalcations.

ಶ್ರೀ ಕೆ. ಎಚ್. ಹನುಮೇಗೌಡ.—ಲಕ್ಷಾಂತರ ಜನ ನಿರುದ್ಯೋಗಿಗಳು ಮಾಡಲು ಕೆಲಸ ಎಲ್ಲಿದೆ ತಮ್ಮ ಜೀವನ ನಡೆಸಲು ತೊಂದರೆ ಪಡುತ್ತಿದ್ದಾರೆ ಇಂತಹವರ ಪೈಕಿ ೫೮೮ ಜನ ನ್ಯಾಯಬೆಲೆ ಅಂಗಡಿ ತೆರೆಯಲು ಅರ್ಜಿ ಹಾಕಿಕೊಂಡರೆ ತಾವು ಕೇವಲ ೧೨೬ ಜನರಿಗೆ ಅನುಮತಿ ಕೊಟ್ಟಿದ್ದೀರಿ, ಇದು ಯಾವ ನ್ಯಾಯ ? ಏನೋ ಅಲ್ಪ ಸ್ವಲ್ಪ ಬಂಡವಾಳ ಹಾಕಿಕೊಂಡು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಇವರು ಮುಂದೆ ಬಂದಾಗ ತಾವು ಅವಕಾಶ ಕೊಡದಿದ್ದರೆ ಹೇಗೆ? ಈ ರೀತಿ ಕಾನೂನನ್ನು ಕಡ್ಡಾಯ ಅರ್ಜಿ ಹಾಕಿಕೊಂಡವರಿಗೆಲ್ಲಾ ಅನುಮತಿ ಕೊಡಬೆಕೆಂದು ತಾವು ಒಂದು ವಾಗಿ ಮಾಡಬೇಕೇ ಹೊರತು ಲಕ್ಷಾಂತರ ರೂ.ಗಳ ಬಂಡವಾಳ ಹಾಕಿ ದೊಡ್ಡ ದೊಡ್ಡ ಮಳಿಗೆಗಳನ್ನು ಕಟ್ಟಿಸಿ ಕೆಲವು ಮಳಿಗೆಗಳನ್ನು ಬಾಡಿಗೆಗೆ ಕೊಟ್ಟಿರುವವರಿಗೆ ಮತ್ತು ಕಾರಿನಲ್ಲಿ ಓಡಾಡುವವರಿಗೆ ಈ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅನುಮತಿ ಕೊಡುವುದು ಯಾವ ಸಾಮಾಜಿಕ ನ್ಯಾಯವಾಗುತ್ತದೆ ? ಇದು ನ್ಯಾಯವೇ ಇದು ಧರ್ಮವೇ ಎಂದು ನಾನು ಕೇಳುತ್ತೇನೆ ? ತಾವು ಏನಾದರೂ ಮಾಡುವುದಿದ್ದರೆ ಮನಃಪೂರ್ವಕವಾಗಿ ಮಾಡಬೇಕು. ಉದಾರ ಮನಸ್ಸಿನಿಂದ ಮಾಡಬೇಕು. ಇನ್ನು ಮುಂದೆಯಾದರೂ ಇವರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡುತ್ತೀರಾ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಮಾಣಿಕ್ ರಾವ್ ಪಾಟೀಲ್.—ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದಕ್ಕೂ ಒಂದು ಮಿತಿ ಇದೆ ೫೦೦ ಕಾರ್ಡುಗಳಿಗಿಂತ ಕಡಿಮೆ ಇದ್ದರೆ ಒಂದು ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಈ ದೇಶದಲ್ಲಿರುವ ಎಲ್ಲ ನಿರುದ್ಯೋಗಿಗಳಿಗೂ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅನುಮತಿ ಕೊಟ್ಟರೆ ಒಂದೊಂದು ಮನೆಗೆ ಒಂದೊಂದು ಅಂಗಡಿ ತೆರೆಯಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ತಾವು ಇಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ನನಗೆ ವ್ಯಥೆಯಾಗುತ್ತದೆ. ನಿರುದ್ಯೋಗಿಗಳಾಗಿರುವವರು ಬಂಡವಾಳ ಹೂಡುತ್ತೇವೆಂದು ಮುಂದೆ ಬಂದಾಗ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅನುಮತಿ ಕೊಡುವಂತೆ ತಾವು ತಮ್ಮ ಅಧಿಕಾರಿಗಳಿಗೆ ಡೈರಕ್ಷನ್ ಕೊಡಿ. ಇಂತಹ ವಿಚಾರದಲ್ಲಿ ತಮಗೆ ಯಾರೋ ಬಂದು ಏನೋ ಹೇಳಿದರೆಂಬ ಕಾರಣದಿಂದ ಈ ಜನರನ್ನು ಬೀದಿ ಪಾಲು ಮಾಡುವುದು ಸರಿಯಲ್ಲ.

SRI MANIK RAO PATIL.—The hon. member is unnecessarily getting excited. Let him have a patient hearing. This allotment is not a new venture. We require about 14 to 15 thousand shops for maintaining the Public Distribution System and their shops would be comming over a period of years. Just in order to get some unemployed graduates employed overnight we cannot dislocate the Public Distribution System. We are trying our best to accommodate the unemployed graduates whenever any vacancy arises either in rural part or in urban part. The hon. member must feel proud and I take it a privilege that in his district, I have given 30 shops for the unemployed graduates which is the highest in the entir State. As I have already said the Government is committed to this policy that whenever we get the opportunity to give more shops and expand our informal rationing, we will certainly keep in view the points of view expressed by hon. members.

Major and Minor Irrigation Works in the State

355 SRI H. GANGADHARAN (Krishnaraj) Will the Minister of State for Major and Medium Irrigation be pleased to state.—

(a) number of Major and Minor works started and completed in the V Plan period in our State for the last five years :

(b) Money spent on major works and Minor works (District-wise) for the past five years ;

(c) the extent of land already irrigated both under Major and Minor Irrigation works in the State for the last 5 years.

(d) current revenue demand and collection under these kinds of works ?

SRI B. B. Chimmanakatti (Minister of State for Major and Medium Irrigation).—

(a) In the V Plan period, no major works have been started and completed. There are 14 Major Projects which are under progress.

Out of 30 Medium works, 9 projects have been started during V Plan but not completed during that period. All medium works are under progress.

Out of 1,825 Minor works 1.023 work have been completed during V Plan period. 605 Minor works, out of 694 spilled over from IV Plan were also completed.

* (b) Vide Statement 'A' is laid on the table.

(c) Vide Statement 'B' is laid on the table.

(d) Vide Statement 'C' is laid on the table.

Note :—Lib No. 44– dated 10th July 1983r